ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:20.11.2018 ರಂದು ಪೂರ್ವಾಹ್ನ: 10:00 ಗಂಟೆಗೆ ಗ್ರಾಅಪ ಇಲಾಖೆಯ ಸಭಾ ಕೊಠಡಿಯಲ್ಲಿ PRIASoft ಮತ್ತು PFMS ತಂತ್ರಾಂಶಗಳ ಸಂಯೋಜನೆ ಹಾಗೂ ಗ್ರಾಮ ಪಂಚಾಯತಿ ದಾಖಲೆಗಳ ದಾಖಲೀಕರಣ ಕುರಿತು ಜರುಗಿದ ಸಭೆಯ ನಡವಳಿಗಳು.

**ಸಭೆಗೆ ಹಾಜರಾದ ಅಧಿಕಾರಿ/ಸಿಬ್ಬಂದಿಗಳು: (ಶ್ರೀ/ಶ್ರೀಮತಿ)**

1. ಎಲ್.ಕೆ.ಅತೀಕ್, ಭಾ.ಆ.ಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.
2. ಪ್ರಶಾಂತ್ ಕುಮಾರ್ ಮಿಶ್ರಾ, ಭಾ.ಆ.ಸೇ, ನಿರ್ದೇಶಕರು(ಇ-ಆಡಳಿತ) (ಪ್ರ), ಗ್ರಾಅಪ ಇಲಾಖೆ, ಬೆಂಗಳೂರು.
3. ಎಂ.ಕೆ.ಕೆಂಪೇಗೌಡ, ನಿರ್ದೇಶಕರು, ಪಂ.ರಾಜ್-1, ಗ್ರಾಅಪ ಇಲಾಖೆ, ಬೆಂಗಳೂರು.
4. ಜುಲ್ಫಿಕರ್ ಉಲ್ಲಾ, ನಿರ್ದೇಶಕರು, ಪಂ.ರಾಜ್-2, ಗ್ರಾಅಪ ಇಲಾಖೆ, ಬೆಂಗಳೂರು.
5. ಎನ್.ಕೃಷ್ಣಪ್ಪ ಕೋಡಿಪಾಳ್ಯ, ನಿರ್ದೇಶಕರು, ಗ್ರಾಮೂಸಾ, ಗ್ರಾಅಪ ಇಲಾಖೆ, ಬೆಂಗಳೂರು.
6. ಪಿ.ಶ್ರೀಕೃಷ್ಣಭಟ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
7. ಪ್ರಶಾಂತ್, ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
8. ಎಂ.ಎಸ್. ವಿಜಯಲಕ್ಷ್ಮಿ, ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
9. ಗಣೇಶ್ ಪ್ರಸಾದ್, ಬೋಧಕರು, ಅ.ನ.ಸಾ.ರಾ.ಗ್ರಾ & ಪಂ.ರಾಜ್, ಮೈಸೂರು.
10. ಗಗನ್ ಎ.ಎಸ್, ಸಹಾಯಕ ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
11. ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
12. ಅಮೃತವರ್ಷಿಣಿ, ತಾಂತ್ರಿಕ ಸಮಾಲೋಚಕರು, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.

ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ ಇವರು ಸಭೆಯಲ್ಲಿ ಹಾಜರಿದ್ದ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು.

**ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ PRIASoft ತಂತ್ರಾಂಶವನ್ನು ಅನುಷ್ಠಾನ ಮಾಡುವ ಬಗ್ಗೆ.**

1. 14ನೇ ಹಣಕಾಸು ಆಯೋಗದ ಅನುದಾನವನ್ನು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಲು ಮತ್ತು ಯೋಜನೆಯಡಿ ಭರಿಸಿದ ವೆಚ್ಚವನ್ನು ದಾಖಲೆ ಮಾಡಲು ಹಾಗೂ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ತರುವ ಸಲುವಾಗಿ ಪಂಚತಂತ್ರ ತಂತ್ರಾಂಶದ ಬದಲಿಗೆ ಪಂಚಾಯತ್ ರಾಜ್ ಮಂತ್ರಾಲಯದ PRIASoft ತಂತ್ರಾಂಶವನ್ನು ಹಾಗೂ PFMS ಬಳಸಲು ಭಾರತ ಸರ್ಕಾರ ಕಡ್ಡಾಯಗೊಳಿಸಿರುವುದಾಗಿ ನಿರ್ದೇಶಕರು (ಇ-ಆಡಳಿತ) ರವರು ಸಭೆಗೆ ತಿಳಿಸಿದರು.
2. ಈ ಸಂಬಂಧ ಈಗಾಗಲೇ ದಿನಾಂಕ:23.09.2018 ಮತ್ತು 24.09.2018 ರಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು, ಎನ್.ಐ.ಸಿ ಯ ಜಿಲ್ಲಾ ಮಾಹಿತಿ ಅಧಿಕಾರಿಗಳು ಹಾಗೂ ಜಿಲ್ಲಾ ಯೋಜನಾ ವ್ಯವಸ್ಥಾಪಕರುಗಳಿಗೆ ತರಬೇತಿಯನ್ನು ನೀಡಲಾಗಿದೆ ಎಂದು ನಿರ್ದೇಶಕರು (ಇ-ಆಡಳಿತ) ರವರು ಸಭೆಗೆ ತಿಳಿಸಿದರು.
3. ಅದರಂತೆ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ PRIASoft ತಂತ್ರಾಂಶವನ್ನು 14ನೇ ಹಣಕಾಸಿನ ಆಯೋಗ ಅನುದಾನದ ಮೇಲ್ವಿಚಾರಣೆ ಮತ್ತು ನಿರ್ವಹಣೆಗಾಗಿ ಬಳಸಲು ಕ್ರಮವಹಿಸಬೇಕೆಂದು ನಿರ್ದೇಶಕರು (ಇ-ಆಡಳಿತ) ರವರು ಸಭೆಗೆ ತಿಳಸಿದರು.
4. PRIASoft ತಂತ್ರಾಂಶವನ್ನು ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಅನುಷ್ಠಾನ ಮಾಡಲು ಕೆಲವೊಂದು ಆಡಳಿತಾತ್ಮಕ ಸಮಸ್ಯೆಗಳಿರುವುದಾಗಿ ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

   ಅ. ಈಗಾಗಲೇ ರಾಜ್ಯ ಸರ್ಕಾರದಿಂದ 2018-19ನೇ ಸಾಲಿನ 14ನೇ ಹಣಕಾಸು ಆಯೋಗದ ಮೊದಲನೇ ಕಂತಿನ ಸಾಮಾನ್ಯ ಮೂಲ ಅನುದಾನವನ್ನು ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿದ್ದು, ಪ್ರಸ್ತುತ 14ನೇ ಹಣಕಾಸು ಅನುದಾನವನ್ನು 75:25 ಅನುಪಾತದಲ್ಲಿ ಸಾಮಾನ್ಯ ಅನುದಾನ ಹಾಗೂ ESCROW ಅನುದಾನವಾಗಿ ವಿಭಾಗಿಸಿ ಪ್ರತ್ಯೇಕ ಗ್ರಾಮ ಪಂಚಾಯತ್‌ನ 14ನೇ ಹಣಕಾಸು ಖಾತೆ ಮತ್ತು ESCROW ಖಾತೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

ಆ. PRIASoft ತಂತ್ರಾಂಶದ State Login ನಲ್ಲಿ ಗ್ರಾಮ ಪಂಚಾಯತಿವಾರು ಬಿಡುಗಡೆ ಮಾಡಲಾದ ಅನುದಾನದ ಮಾಹಿತಿಯನ್ನು ನಮೂದು ಮಾಡುವ ಅವಶ್ಯಕತೆ ಇದ್ದು, 14ನೇ ಹಣಕಾಸು ಆಯೋಗದ ಅನುದಾನದ ಮಾರ್ಗಸೂಚಿಯನ್ವಯ ಅನುದಾದಲ್ಲಿ 90% ಅನುದಾನವನ್ನು ಮೂಲಭೂತ ಅನುದಾನವಾಗಿ ಆಸ್ತಿ ಸೃಜನೆ ಕಾಮಗಾರಿಗಳಿಗೆ ಮೀಸಲಿಟ್ಟು ಮತ್ತು 10% ಅನುದಾನವನ್ನು ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಉಪಯೋಗಿಸಲು ಅವಕಾಶವಿದ್ದು ಅನುದಾನದಲ್ಲಿ ಪ್ರತ್ಯೇಕವಾಗಿ ESCROW ಗಾಗಿ ಯಾವುದೇ ಘಟಕ(component) ಇರುವುದಿಲ್ಲವೆಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಯ ಗಮನಕ್ಕೆ ತಂದರು.

ಇ. PRIASoft ತಂತ್ರಾಂಶದ state login ನಲ್ಲಿ ಗ್ರಾಮ ಪಂಚಾಯತಿವಾರು ಬಿಡುಗಡೆಯನ್ನು ಅಳವಡಿಸುವ ಅವಶ್ಯಕತೆಯಿದ್ದು ನಮೂದಿಸುವಾಗ ತಂತ್ರಾಂಶದಲ್ಲಿ 75% ಬಿಡುಗಡೆ ನಮೂದಿಸಿದಲ್ಲಿ ಪಂಚಾಯತ್ ರಾಜ್ ಮಂತ್ರಾಲಯ, ಭಾರತ ಸರ್ಕಾರವು(GoI) ಉಳಿದ 25% ಬಿಡುಗಡೆ ಬಗ್ಗೆ ಪ್ರಶ್ನಿಸುತ್ತದೆ. PRIASoft ತಂತ್ರಾಂಶದಲ್ಲಿ 100% ರಷ್ಟು ಬಿಡುಗಡೆಯನ್ನು ನಮೂದಿಸಿದಲ್ಲಿ, ಗ್ರಾಮ ಪಂಚಾಯತಿಯು 25% ರ ಅನುದಾನ ಬಿಡುಗಡೆಯನ್ನು PRIASoft ತಂತ್ರಾಂಶದಲ್ಲಿ ತೋರಿಸಲಾಗುವುದಿಲ್ಲ.

<u>ನಿರ್ಣಯಗಳು:</u>

1. ಪ್ರಸ್ತುತ 14ನೇ ಹಣಕಾಸು ಆಯೋಗ ಅನುದಾನವನ್ನು 75:25 ಅನುಪಾತದಲ್ಲಿ ಬಿಡುಗಡೆಗೆ ಅನುಸರಿಸುತ್ತಿರುವ ಕಾರ್ಯವಿಧಾನವನ್ನು ಕೈಬಿಡಲು ಸಭೆಯಲ್ಲಿ ನಿರ್ಧರಿಸಲಾಯಿತು ಮತ್ತು ಈ ಸಂಬಂಧ ಸೂಕ್ತ ಆದೇಶವನ್ನು ಹೊರಡಿಸಲು ನಿರ್ದೇಶಕರು, (ಪಂ.ರಾಜ್-2) ರವರಿಗೆ ಮಾನ್ಯ ಪ್ರಧಾನ ಕಾರ್ಯದರ್ಶಿರವರು ಸೂಚಿಸಿದರು.

   **ಕ್ರಮ: ನಿರ್ದೇಶಕರು (ಪಂ.ರಾಜ್-2)**

2. ಮುಂದಿನ 14ನೇ ಹಣಕಾಸಿನ ಆಯೋಗದ ಅನುದಾನದ ಎಲ್ಲಾ ಕಂತುಗಳನ್ನು ಶೇ.100 ರಷ್ಟು ಅನುದಾನವನ್ನು ಗ್ರಾಮ ಪಂಚಾಯತ್‌ನ 14ನೇ ಹಣಕಾಸಿನ ಖಾತೆಗಳಿಗೆ ಬಿಡುಗಡೆ ಮಾಡಲು ಮಾನ್ಯ ಪ್ರಧಾನ ಕಾರ್ಯದರ್ಶಿರವರು ನಿರ್ದೇಶಕರು (ಪಂ.ರಾಜ್-2) ರವರಿಗೆ ಸೂಚಿಸಿದರು.

   **ಕ್ರಮ: ನಿರ್ದೇಶಕರು (ಪಂ.ರಾಜ್-2)**

3. ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾದ ಶೇ.100 ರಷ್ಟು ಅನುದಾನದಲ್ಲಿ ಶೇ.25 ರಷ್ಟು ಅನುದಾನವನ್ನು ಗ್ರಾಮ ಪಂಚಾಯತ್‌ರವರು ವಿದ್ಯುತ್ ಮಂಡಳಿರವರಿಗೆ PFMS ಮೂಲಕ ಪಾವತಿ ಮಾಡುವಂತೆ ಅನುವಾಗಲು ಕ್ರಮವಹಿಸುವಂತೆ ನಿರ್ದೇಶಕರು(ಪಂ.ರಾಜ್-2) ರವರಿಗೆ ಮಾನ್ಯ ಪ್ರಧಾನ ಕಾರ್ಯದರ್ಶಿರವರು ಸೂಚಿಸಿದರು.

   **ಕ್ರಮ: ನಿರ್ದೇಶಕರು (ಪಂ.ರಾಜ್-2)**

4. ಗ್ರಾಮ ಪಂಚಾಯತ್‌ನ ವಿದ್ಯುತ್ ಮಂಡಳಿಯವರಿಗೆ PFMS ಮೂಲಕ ಪಾವತಿ ಮಾಡಲು ಗ್ರಾಮ ಪಂಚಾಯತಿಯ PRIASoft ತಂತ್ರಾಂಶದಲ್ಲಿ ಕಡ್ಡಾಯವಾಗಿ ವಿದ್ಯುತ್ ಮಂಡಳಿಯವರನ್ನು Vendor ಗಳನ್ನಾಗಿ ನೋಂದಣಿ ಮಾಡುವಂತೆ ನಿರ್ದೇಶನ ನೀಡಲು ಹಾಗೂ Vendor ನೋಂದಣಿ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡುವಂತೆ ಮಾನ್ಯ ಪ್ರಧಾನ ಕಾರ್ಯದರ್ಶಿಯವರು ನಿರ್ದೇಶಕರು (ಇ-ಆಡಳಿತ) ರವರಿಗೆ ಸೂಚಿಸಿದರು.

   **ಕ್ರಮ: ನಿರ್ದೇಶಕರು (ಇ-ಆಡಳಿತ)**

5. ಗ್ರಾಮ ಪಂಚಾಯತ್‌ರವರು PFMS ಮೂಲಕ ವಿದ್ಯುತ್ ಮಂಡಳಿರವರಿಗೆ ಪಾವತಿ ಮಾಡುವುದನ್ನು ಮೇಲ್ವಿಚಾರಣೆ ಮಾಡಲು ನಿರ್ದೇಶಕರು (ಪಂ.ರಾಜ್-2) ರವರಿಗೆ ಮಾನ್ಯ ಪ್ರಧಾನ ಕಾರ್ಯದರ್ಶಿಯವರು ಸೂಚಿಸಿದರು.

   **ಕ್ರಮ: ನಿರ್ದೇಶಕರು (ಪಂ.ರಾಜ್-2)**

6. 2018-19ನೇ ಸಾಲಿನ 14ನೇ ಹಣಕಾಸು ಆಯೋಗದ ಮೊದಲನೇ ಕಂತಿನ ಸಾಮಾನ್ಯ ಮೂಲ ಅನುದಾನವನ್ನು ಈಗಾಗಲೇ 75:25 ಅನುಪಾತದಲ್ಲಿ ಬಿಡುಗಡೆ ಮಾಡಿರುವುದರಿಂದ, PRIASoft ತಂತ್ರಾಂಶದಲ್ಲಿ 100% ರಷ್ಟು ಅನುದಾನ ನಮೂದಿಸಲು ಕ್ರಮವಹಿಸುವಂತೆ ನಿರ್ದೇಶಕರು(ಇ-ಆಡಳಿತ) ರವರಿಗೆ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಸೂಚಿಸಿದರು ಮತ್ತು ನಿರ್ದೇಶಕರು(ಪಂ.ರಾಜ್-2) ರವರಿಗೆ ಇದರ ಬಗ್ಗೆ ಕೇಂದ್ರ ಸರ್ಕಾರದವರೊಂದಿಗೆ ಸಮನ್ವಯ ಮಾಡಲು ಸೂಚಿಸಿದರು.

   **ಕ್ರಮ: ನಿರ್ದೇಶಕರು (ಇ-ಆಡಳಿತ), ನಿರ್ದೇಶಕರು (ಪಂ.ರಾಜ್-2)**

7. ಪ್ರಸ್ತುತ 14ನೇ ಹಣಕಾಸಿನ ಆಯೋಗ ಅನುದಾನದ ಮೇಲ್ವಿಚಾರಣೆಗೆ ಪಂಚತಂತ್ರ ತಂತ್ರಾಂಶವನ್ನು ಬಳಸಲಾಗುತ್ತಿದ್ದು, ಪಂಚತಂತ್ರ ತಂತ್ರಾಂಶವನ್ನು ಕೈಬಿಡುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು ಹಾಗೂ ಅದರಂತೆ ಗ್ರಾಮ ಪಂಚಾಯತಿರವರಿಗೆ ನಿರ್ದೇಶನ ನೀಡಲು ಸೂಕ್ತ ಆದೇಶವನ್ನು ಹೊರಡಿಸಲು ನಿರ್ದೇಶಕರು(ಇ–ಆಡಳಿತ) ರವರಿಗೆ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಸೂಚಿಸಿದರು.

**ಕ್ರಮ: ನಿರ್ದೇಶಕರು (ಇ–ಆಡಳಿತ)**

8. 2018–19ನೇ ಸಾಲಿನ ಅನುದಾನದ ಮೇಲ್ವಿಚಾರಣೆಗೆ PRIASoft ತಂತ್ರಾಂಶವನ್ನು ಬಳಸಲು ಹಾಗೂ ಅನುದಾನದ ವೆಚ್ಚ ಮತ್ತು ಪಾವತಿಗಳನ್ನು PFMS ತಂತ್ರಾಂಶದ ಮೂಲಕವೇ ಕಡ್ಡಾಯವಾಗಿ ಮಾಡಲು ಗ್ರಾಮ ಪಂಚಾಯತಿಗಳಿಗೆ ನಿರ್ದೇಶನ ನೀಡಲು ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

**ಕ್ರಮ: ನಿರ್ದೇಶಕರು (ಪಂ.ರಾಜ್–2)**

**ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ PlanPlus ತಂತ್ರಾಂಶವನ್ನು ಅನುಷ್ಠಾನ ಮಾಡುವ ಬಗ್ಗೆ:**

1. 2015–16, 2016–17 ಹಾಗೂ 2017–18 ಸಾಲುಗಳಲ್ಲಿ ನಮ್ಮ ಗ್ರಾಮ ನಮ್ಮ ಯೋಜನೆ(GPDP) ಕ್ರಿಯಾ ಯೋಜನೆಯ ತಯಾರಿಕೆಗಾಗಿ ಇಲಾಖೆಯು ಗಾಂಧಿ ಸಾಕ್ಷಿ ಕಾಯಕ ಹಾಗೂ ಪಂಚತಂತ್ರ ತಂತ್ರಾಂಶವನ್ನು ಬಳಸಿರುತ್ತದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

2. ಗಾಂಧಿ ಸಾಕ್ಷಿ ಕಾಯಕ ಹಾಗೂ ಪಂಚತಂತ್ರ ತಂತ್ರಾಂಶಗಳನ್ನು ಬಳಸಿ ರಚಿಸಲಾದ 2016–17 ಮತ್ತು 2017–18ನೇ ಸಾಲಿನ ನಮ್ಮ ಗ್ರಾಮ ನಮ್ಮ ಯೋಜನೆ(GPDP) ಕ್ರಿಯಾ ಯೋಜನೆಗಳನ್ನು ವೆಬ್‌ಸರ್ವಿಸ್ (Web service) ಮೂಲಕ PlanPlus ತಂತ್ರಾಂಶಕ್ಕೆ push ಮಾಡಲಾಗಿದ್ದು ತಿಂಗಳ ಅಂತ್ಯದೊಳಗೆ ಈ ಪ್ರಕ್ರಿಯೆಯನ್ನು ಎನ್.ಐ.ಸಿ ರವರು ಮುಕ್ತಾಯಗೊಳಿಸಬೇಕಾಗಿ ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಯ ಗಮನಕ್ಕೆ ತಂದರು.

3. 2018–19ನೇ ಸಾಲಿನ ನಮ್ಮ ಗ್ರಾಮ ನಮ್ಮ ಯೋಜನೆ(GPDP) ಕ್ರಿಯಾ ಯೋಜನೆಯ ತಯಾರಿಕೆಗಾಗಿ ಪಂಚಾಯತ್ ರಾಜ್ ಮಂತ್ರಾಲಯದ PlanPlus ತಂತ್ರಾಂಶವನ್ನು ಬಳಸಲು ತಿಳಿಸಿರುವುದರಿಂದ ಜಿಲ್ಲಾ ಪಂಚಾಯತಿಯ ಅಧಿಕಾರಿಗಳಿಗೆ ರಾಜ್ಯ ಮಟ್ಟದಲ್ಲಿ ತರಬೇತಿಯನ್ನು ನೀಡಲಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ತಿಳಿಸಿದರು.

**ನಿರ್ಣಯ:**

ಮಾನ್ಯ ಪ್ರಧಾನ ಕಾರ್ಯದರ್ಶಿಯವರು ನಮ್ಮ ಗ್ರಾಮ ನಮ್ಮ ಯೋಜನೆ(GPDP) ಕ್ರಿಯಾ ಯೋಜನೆಯ ತಯಾರಿಕೆಗಾಗಿ ಮತ್ತು ಕ್ರಿಯಾ ಯೋಜನೆಯನ್ನು ನಮೂದಿಸಲು PlanPlus ತಂತ್ರಾಂಶವನ್ನು ಬಳಸಲು ಸಮ್ಮತಿ ನೀಡಿದರು ಹಾಗೂ ಸೂಕ್ತ ಕ್ರಮವಹಿಸಲು ಮತ್ತು ಅಗತ್ಯ ಆದೇಶವನ್ನು ಹೊರಡಿಸಲು ನಿರ್ದೇಶಕರು(ಪಂ.ರಾಜ್–2) ರವರಿಗೆ ಸೂಚಿಸಿದರು.

**ಕ್ರಮ: ನಿರ್ದೇಶಕರು (ಪಂ.ರಾಜ್–2)**

4. ಪ್ರಸ್ತುತ ಗ್ರಾಮ ಪಂಚಾಯತಿರವರು ಎಲ್ಲಾ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಿಗೆ ಗ್ರಾಮ ಪಂಚಾಯತಿಯವರು ಒಂದೇ ನಮ್ಮ ಗ್ರಾಮ ನಮ್ಮ ಯೋಜನೆ(GPDP) ಕ್ರಿಯಾ ಯೋಜನೆ ತಯಾರಿಸದೇ, ಬಿಡುಗಡೆಯಾದ ಅನುದಾನದ ಕಂತುಗಳನ್ವಯ ನಮ್ಮ ಗ್ರಾಮ ನಮ್ಮ ಯೋಜನೆ(GPDP) ಕ್ರಿಯಾ ಯೋಜನೆಗಳನ್ನು ತಯಾರಿಸುತ್ತಿರುವುದು ಹಾಗೂ ಒಂದು ಯೋಜನೆಗೆ ಒಂದಕ್ಕಿಂತ ಹೆಚ್ಚು ಕ್ರಿಯಾ ಯೋಜನೆಗಳನ್ನು ತಯಾರಿಸಿ ನಮ್ಮ ಗ್ರಾಮ ನಮ್ಮ ಯೋಜನೆ(GPDP) ತಂತ್ರಾಂಶದಲ್ಲಿ ಅಳವಡಿಸುತ್ತಿರುವುದು ಕಂಡುಬಂದಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

ನಿರ್ಣಯ:

ಮಾನ್ಯ ಪ್ರಧಾನ ಕಾರ್ಯದರ್ಶಿಯವರು ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ 14ನೇ ಹಣಕಾಸು ಆಯೋಗ ಅನುದಾನ ಸೇರಿದಂತೆ ಎಲ್ಲಾ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಿಗೆ ಕಡ್ಡಾಯವಾಗಿ ಸಮಗ್ರ ನಮ್ಮ ಗ್ರಾಮ ನಮ್ಮ ಯೋಜನೆ(GPDP) ಕ್ರಿಯಾ ಯೋಜನೆ ತಯಾರಿಸುವಂತೆ ನಿರ್ದೇಶನ ನೀಡಲು ನಿರ್ದೇಶಕರು (ಪಂ.ರಾಜ್-2) ರವರಿಗೆ ಸೂಚಿಸಿದರು ಹಾಗೂ ಹೆಚ್ಚುವರಿ ಅನುದಾನ ಬಿಡುಗಡೆಯಾದಲ್ಲಿ ಪೂರಕ (supplementary) ಕ್ರಿಯಾ ಯೋಜನೆ ತಯಾರಿಸುವಂತೆ ನಿರ್ದೇಶನ ನೀಡಲು ನಿರ್ದೇಶಕರು (ಪಂ.ರಾಜ್-2) ರವರಿಗೆ ತಿಳಿಸಿದರು ಮತ್ತು ಎಲ್ಲಾ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಿಗೆ ಒಂದೇ ಸಮಗ್ರ ನಮ್ಮ ಗ್ರಾಮ ನಮ್ಮ ಯೋಜನೆ(GPDP) ಕ್ರಿಯಾ ಯೋಜನೆ ತಯಾರಿಸಿ PlanPlus ತಂತ್ರಾಂಶದಲ್ಲಿ ಅಳವಡಿಸುವಂತೆ ಗ್ರಾಮ ಪಂಚಾಯತಿಯವರಿಗೆ ನಿರ್ದೇಶನ ನೀಡಲು ನಿರ್ದೇಶಕರು(ಪಂ.ರಾಜ್-2) ರವರಿಗೆ ಸೂಚಿಸಿದರು.

ಕ್ರಮ: ನಿರ್ದೇಶಕರು(ಪಂ.ರಾಜ್-2)

5. ಪ್ರಸ್ತುತ ಗ್ರಾಮ ಪಂಚಾಯತಿಗಳ ಕ್ರಿಯಾ ಯೋಜನೆಗಳನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಂದ ಪರಿಶೀಲಿಸಿ ಅನುಮೋದನೆ ಪಡೆಯಲಾಗುತ್ತಿದೆ. ಆದರೆ PlanPlus ತಂತ್ರಾಂಶದಲ್ಲಿ ಅಳವಡಿಸಲಾದ ಕ್ರಿಯಾ ಯೋಜನೆಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರೇ ಅನುಮೋದನೆ ಮಾಡಬಹುದಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

ನಿರ್ಣಯ:

ನಮ್ಮ ಗ್ರಾಮ ನಮ್ಮ ಯೋಜನೆ(GPDP) ಕ್ರಿಯಾ ಯೋಜನೆಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಂದ ಅನುಮೋದನೆ ಪಡೆದ ನಂತರ PlanPlus ತಂತ್ರಾಂಶದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಅನುಮೋದನೆ ನೀಡಬೇಕೆಂದು ಗ್ರಾಮ ಪಂಚಾಯತಿರವರಿಗೆ ನಿರ್ದೇಶನ ನೀಡಲು ನಿರ್ದೇಶಕರು (ಪಂ.ರಾಜ್-2) ರವರಿಗೆ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಸೂಚಿಸಿದರು.

ಕ್ರಮ: ನಿರ್ದೇಶಕರು(ಪಂ.ರಾಜ್-2)

6. 2018-19 ನೇ ಸಾಲಿನ ನಮ್ಮ ಗ್ರಾಮ ನಮ್ಮ ಯೋಜನೆ(GPDP) ಕ್ರಿಯಾ ಯೋಜನೆಯ ತಯಾರಿಕೆಗೆ PlanPlus ತಂತ್ರಾಂಶವನ್ನು ಬಳಕೆ ಮಾಡಲು ತೀರ್ಮಾನಿಸಿರುವುದರಿಂದ, ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ GPDP module ಅನ್ನು ಕೈಬಿಡಲು ನಿರ್ಣಯ ತೆಗೆದುಕೊಳ್ಳಬೇಕೆಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಯ ಗಮನಕ್ಕೆ ತಂದರು. ಅದರಂತೆ ಮಾನ್ಯ ಪ್ರಧಾನ ಕಾರ್ಯದರ್ಶಿರವರು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ GPDP module ಅನ್ನು ಕೈಬಿಡಲು ಸಮ್ಮತಿ ನೀಡಿ ತಂತ್ರಾಂಶದಲ್ಲಿ ಅಗತ್ಯ ಮಾರ್ಪಾಡು ಮಾಡಲು ಎನ್.ಐ.ಸಿ ಅಧಿಕಾರಿಗಳಿಗೆ ಸೂಚಿಸಿದರು.

ಕ್ರಮ: ಎನ್.ಐ.ಸಿ

ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ Actionsoft ತಂತ್ರಾಂಶವನ್ನು ಅನುಷ್ಠಾನ ಮಾಡುವ ಬಗ್ಗೆ.

1. ಪ್ರಸ್ತುತ ಗ್ರಾಮ ಪಂಚಾಯತಿಗಳಿಂದ ಅನುಷ್ಠಾನವಾಗುವ ಎಲ್ಲಾ ಕಾಮಗಾರಿಗಳ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ಅಳವಡಿಸಲು ಹಾಗೂ ಮೇಲ್ವಿಚಾರಣೆ ಮಾಡಲು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶವನ್ನು ಬಳಸಲಾಗುತ್ತಿದ್ದು, ಪಂಚಾಯತ್ ರಾಜ್ ಮಂತ್ರಾಲಯದವರು ಗ್ರಾಮ ಪಂಚಾಯತಿಗಳಿಂದ ಅನುಷ್ಠಾನವಾಗುವ 14ನೇ ಹಣಕಾಸು ಆಯೋಗದ ಅನುದಾನಕ್ಕೆ ಸಂಬಂಧಪಟ್ಟ ಕಾಮಗಾರಿಗಳ Geotag ಮಾಹಿತಿಯನ್ನು Actionsoft ತಂತ್ರಾಂಶದಲ್ಲಿ ಅಳವಡಿಸುವುದನ್ನು ಕಡ್ಡಾಯಗೊಳಿಸಿರುತ್ತಾರೆ ಎಂದು ನಿರ್ದೇಶಕರು (ಇ-ಆಡಳಿತ) ರವರು ಸಭೆಗೆ ತಿಳಿಸಿದರು.

2. ಈ ಬಗ್ಗೆ ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ ರವರು ಮಾತನಾಡಿ 2015-16, 2016-17 ಮತ್ತು 2017-18ನೇ ಸಾಲಿನಲ್ಲಿ ಅನುಷ್ಠಾನವಾದ 14ನೇ ಹಣಕಾಸು ಆಯೋಗದ ಕಾಮಗಾರಿಗಳ Geotag ಮಾಹಿತಿಯನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಿಂದ Actionsoft ತಂತ್ರಾಂಶಕ್ಕೆ push ಮಾಡಲು ಕ್ರಮವಹಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.
3. ಗ್ರಾಮ ಪಂಚಾಯತಿಯ ನಮ್ಮ ಗ್ರಾಮ ನಮ್ಮ ಯೋಜನೆ(GPDP) ಕ್ರಿಯಾ ಯೋಜನೆಗಳನ್ನು PlanPlus ತಂತ್ರಾಂಶಕ್ಕೆ ಅಳವಡಿಸಲು ತೀರ್ಮಾನಿಸಿರುವುದರಿಂದ ಹಾಗೂ ಪಂಚಾಯತ್ ರಾಜ್ ಮಂತ್ರಾಲಯದವರು 14ನೇ ಹಣಕಾಸು ಆಯೋಗದ ಅನುದಾನದ ಕಾಮಗಾರಿಗಳ Geotag ಮಾಹಿತಿಯನ್ನು Actionsoft ತಂತ್ರಾಂಶದಲ್ಲಿ ಅಳವಡಿಸಲು ತಿಳಿಸಿರುವುದರಿಂದ, 14ನೇ ಹಣಕಾಸು ಆಯೋಗ ಅನುದಾನದ ಕಾಮಗಾರಿಗಳ ಭೌತಿಕ ಪ್ರಗತಿಯನ್ನು ಅಳವಡಿಸಲು Actionsoft ತಂತ್ರಾಂಶವನ್ನು ಹಾಗೂ ಸದರಿ ಕಾಮಗಾರಿಗಳನ್ನು Geotag ಮಾಡಲು mActionsoft Mobile App ನ್ನು ಬಳಸಬಹುದಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

<u>ನಿರ್ಣಯ:</u>

ಮಾನ್ಯ ಪ್ರಧಾನ ಕಾರ್ಯದರ್ಶಿಯವರು 14ನೇ ಹಣಕಾಸು ಆಯೋಗ ಅನುದಾನದ ಕಾಮಗಾರಿಗಳ ಭೌತಿಕ ಪ್ರಗತಿಯನ್ನು ಅಳವಡಿಸಲು Actionsoft ತಂತ್ರಾಂಶವನ್ನು ಹಾಗೂ ಸದರಿ ಕಾಮಗಾರಿಗಳನ್ನು Geotag ಮಾಡಲು mActionsoft Mobile app ನ್ನು ಬಳಸುವಂತೆ ಮತ್ತು ಗ್ರಾಮ ಪಂಚಾಯತಿಗಳಲ್ಲಿ ಇನ್ನು ಉಳಿದ ಯೋಜನೆಗಳಲ್ಲಿ ಅನುಷ್ಠಾನವಾಗುವ ಕಾಮಗಾರಿಗಳಿಗೆ ಪ್ರಗತಿಯನ್ನು ಅಳವಡಿಸಲು ಹಾಗೂ ಮೇಲ್ವಿಚಾರಣೆ ಮಾಡಲು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶವನ್ನು ಬಳಸುವಂತೆ ಗ್ರಾಮ ಪಂಚಾಯತಿಗಳಿಗೆ ನಿರ್ದೇಶನ ನೀಡಲು ನಿರ್ದೇಶಕರು(ಇ-ಆಡಳಿತ) ರವರಿಗೆ ಸೂಚಿಸಿದರು.

<u>ಕ್ರಮ: ನಿರ್ದೇಶಕರು(ಇ-ಆಡಳಿತ)</u>

<u>**PFMS ಅನುಷ್ಠಾನ:**</u>

1. PFMS ತಂತ್ರಾಂಶದಲ್ಲಿ ಈಗಾಗಲೇ 5102 ಗ್ರಾಮ ಪಂಚಾಯತಿಗಳ 14ನೇ ಹಣಕಾಸು ಆಯೋಗದ ಅನುದಾನ ಖಾತೆಗಳನ್ನು ನೋಂದಣಿ ಮಾಡಲಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.
2. ಪಂಚಾಯತ್ ರಾಜ್ ಮಂತ್ರಾಲಯ, ಭಾರತ ಸರ್ಕಾರದವರು 14ನೇ ಹಣಕಾಸು ಆಯೋಗದ ಅನುದಾನದ ಎಲ್ಲಾ ವೆಚ್ಚವನ್ನು PFMS ತಂತ್ರಾಂಶದ ಮೂಲಕ ಭರಿಸಲು ಸೂಚಿಸಿರುತ್ತಾರೆ.
3. PFMS ತಂತ್ರಾಂಶವನ್ನು ಬಳಸುವಲ್ಲಿ ಕೆಲವೊಂದು ತಾಂತ್ರಿಕ ಸಮಸ್ಯೆಗಳಿದ್ದು, PFMS ರಾಜ್ಯ ತಂಡದೊಂದಿಗೆ ಚರ್ಚಿಸಬಹುದಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

<u>ನಿರ್ಣಯ:</u>

ಮಾನ್ಯ ಪ್ರಧಾನ ಕಾರ್ಯದರ್ಶಿಯವರು PFMS ರಾಜ್ಯ ತಂಡದೊಂದಿಗೆ ಸಭೆಯನ್ನು ಏರ್ಪಡಿಸಲು ನಿರ್ದೇಶಕರು(ಇ-ಆಡಳಿತ) ರವರಿಗೆ ಸೂಚಿಸಿದರು.

ಕ್ರಮ: ನಿರ್ದೇಶಕರು (ಇ-ಆಡಳಿತ)

## Digitalization of GP Documents:

ಬಜೆಟ್ ಕಂಡಿಕೆ ಸಂಖ್ಯೆ(277) ರಂತೆ ಗ್ರಾಮ ಪಂಚಾಯತಿಗಳ ದಾಖಲೆ ಮತ್ತು ದಾಖಲಾತಿಗಳನ್ನು ಗಣಕೀಕರಣಗೊಳಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಇಲಾಖೆಯ ಎಲ್ಲಾ ತಂತ್ರಾಂಶಗಳ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು NIC ಮುಖಾಂತರವೇ ಕೈಗೊಳ್ಳುತ್ತಿರುವುದರಿಂದ ದಾಖಲೆ ಮತ್ತು ದಾಖಲಾತಿಗಳನ್ನು ಗಣಕೀಕರಣಗೊಳಿಸುವ ಬಗ್ಗೆ Application/Website ನ್ನು ವಿನ್ಯಾಸಗೊಳಿಸಲು NIC ಯವರಿಗೆ ಈಗಾಗಲೇ ತಿಳಿಸಿದ್ದರೂ ಕೂಡ ಈವರೆಗೂ Application/Website ನ್ನು ವಿನ್ಯಾಸಗೊಳಿಸದಿರುವ ಬಗ್ಗೆ ನಿರ್ದೇಶಕರು(ಇ-ಆಡಳಿತ) ರವರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ NIC ಯವರು Application/Website ನ್ನು ವಿನ್ಯಾಸಗೊಳಿಸುವ ಬಗ್ಗೆ ಕೆಲವೊಂದು ತಾಂತ್ರಿಕ ಮಾಹಿತಿಯನ್ನು ನೀಡಲು ಕೋರಿದರು.

ಈ ಬಗ್ಗೆ ರಾಜ್ಯ ಯೋಜನಾ ವ್ಯವಸ್ಥಾಪಕರು Application/Website ನ್ನು ವಿನ್ಯಾಸಗೊಳಿಸಲು ಅಗತ್ಯವಿರುವ requirements ಮತ್ತು ತಾಂತ್ರಿಕ ಮಾಹಿತಿಯನ್ನು NIC ಗೆ ನೀಡಲು ನಿರ್ದೇಶಕರು(ಇ-ಆಡಳಿತ) ರವರು ಸೂಚಿಸಿದರು.

1. 2018-19 ನೇ ಸಾಲಿಗೆ 10 ಜಿಲ್ಲಾ ಪಂಚಾಯತಿಗಳಲ್ಲಿ 2000 ಗ್ರಾಮ ಪಂಚಾಯತ್‌ಗಳನ್ನು ಈ ಕೆಳಗಿನಂತೆ ಆಯ್ಕೆ ಮಾಡಿ (ಪ್ರತಿ ಗ್ರಾಮ ಪಂಚಾಯತ್‌ಗೆ ₹ 25,000 ರಂತೆ) ಒಟ್ಟು ₹ 5.00 ಕೋಟಿ ಅನುದಾನವನ್ನು ಬಳಸಿಕೊಂಡು ದಾಖಲೆಗಳನ್ನು ಗಣಕೀಕರಣಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

| ಕ್ರಸಂ | ಜಿ.ಪಂ | ಗ್ರಾ.ಪಂ. ಗಳ ಸಂಖ್ಯೆ | ಆಯ್ಕೆ ಮಾಡಿದ ಗ್ರಾ.ಪಂ. ಗಳ ಸಂಖ್ಯೆ |
|---|---|---|---|
| 1 | ರಾಮನಗರ | 127 | 127 |
| 2 | ತುಮಕೂರು | 331 | 331 |
| 3 | ಮೈಸೂರು | 266 | 266 |
| 4 | ಕೋಲಾರ | 156 | 156 |
| 5 | ಚಿಕ್ಕಬಳ್ಳಾಪುರ | 157 | 157 |
| 6 | ಕಲಬುರಗಿ | 264 | 264 |
| 7 | ದಕ್ಷಿಣ ಕನ್ನಡ | 230 | 230 |
| 8 | ಉಡುಪಿ | 158 | 158 |
| 9 | ಕೊಡಗು | 104 | 104 |
| 10 | ಉತ್ತರ ಕನ್ನಡ | 231 | 207 |
| | (ಹಳಿಯಾಳ ಹೊರತುಪಡಿಸಿ)<br>1. ಶಿರಸಿ ತಾ॥ - 32 ಗ್ರಾ.ಪಂ<br>2. ಭಟ್ಕಳ್ ತಾ॥ - 16<br>3. ಕಾರವಾರ ತಾ॥ - 18<br>4. ಅಂಕೋಲಾ ತಾ॥ - 21<br>5. ಹೊನ್ನಾವರ ತಾ॥ - 28<br>6. ಸೂಪಾ ತಾ॥ - 16<br>7. ಸಿದ್ಧಾಪುರ ತಾ॥ - 23<br>8. ಯಲ್ಲಾಪುರ ತಾ॥ - 15<br>9. ಕುಮಟಾ ತಾ॥ - 22<br>10. ಮುಂಡಗೋಡ ತಾ॥ - 16<br>207 | | |
| | ಒಟ್ಟು | | 2000 |

2. **ಬೆಂಗಳೂರು (ನಗರ)** ಮತ್ತು **ಬೆಂಗಳೂರು (ಗ್ರಾಮಾಂತರ)** ಜಿಲ್ಲಾ ಪಂಚಾಯತಿಗಳ ಗ್ರಾಮ ಪಂಚಾಯತಿಗಳು ದಾಖಲೆ ಮತ್ತು ದಾಖಲಾತಿಗಳನ್ನು ಗಣಕೀಕರಣಗೊಳಿಸಲು ತಗಲುವ ವೆಚ್ಚವನ್ನು ಗ್ರಾಮ ಪಂಚಾಯತಿಯ ಸ್ವಂತ ನಿಧಿಯಿಂದಲೇ ಭರಿಸಲು ಕ್ರಮವಹಿಸುವುದು. ಉಳಿದ ಜಿಲ್ಲಾ ಪಂಚಾಯತಿಗಳಿಗೆ ಮುಂದಿನ ಹಂತದಲ್ಲಿ ಕ್ರಮವಹಿಸಲು ತೀರ್ಮಾನಿಸಲಾಯಿತು.

ಕೊನೆಯಲ್ಲಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

**ಸಂ:**ಗ್ರಾಅಪ/24/ಗ.ಕೋಶ/2018
**ದಿನಾಂಕ:**23.11.2018

(ಎಲ್.ಕೆ.ಅತೀಕ್, ಭಾ.ಆ.ಸೇ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ನಿರ್ದೇಶಕರು, ಪಂ.ರಾಜ್-1, ಗ್ರಾಅಪ ಇಲಾಖೆ, ಬೆಂಗಳೂರು.
2. ನಿರ್ದೇಶಕರು, ಪಂ.ರಾಜ್-2, ಗ್ರಾಅಪ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಗ್ರಾಮೂಸೌ, ಗ್ರಾಅಪ ಇಲಾಖೆ, ಬೆಂಗಳೂರು.
4. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
5. ಪ್ರಶಾಂತ್, ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
6. ಎಂ.ಎಸ್. ವಿಜಯಲಕ್ಷ್ಮಿ, ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
7. ಪ್ರಾಣೇಶ್ ರಾವ್ ಡಿ., ನಿರ್ದೇಶಕರು, ಅ.ನ.ಸಾ.ರಾ.ಗ್ರಾ & ಪಂ.ರಾಜ್, ಮೈಸೂರು.
8. ಗಣೇಶ್ ಪ್ರಸಾದ್, ಬೋಧಕರು, ಅ.ನ.ಸಾ.ರಾ.ಗ್ರಾ & ಪಂ.ರಾಜ್, ಮೈಸೂರು.
9. ಸಹಾಯಕ ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
10. ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
11. ತಾಂತ್ರಿಕ ಸಮಾಲೋಚಕರು, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.